ಹುಡಿ. ಇಡೀ ದಿವ್ಸ ಅದರಾಗ ಕೂಡಬೇಕಾಗ್ತದ. ನನಗ ಆಗೂದುಲ್ಲವಾ. ನೀವ ಮಾಡಿಕೋರಿ" ಎಂದಿದ್ದಳು. ಮನೆಯ ಹಿರಿ ಸೊಸೆಯ ವರ್ತನೆಗೆ ಸರಜಕ್ಕ ಬಹುವಾಗಿ ನೊಂದಿದ್ದರು. ಇಕ್ಕುಳದಲ್ಲಿ ಸಿಕ್ಕ ಹಾಗಿತ್ತು ರವಿಯ ಪರಿಸ್ಥಿತಿ. ಕೊನೆಗೆ ತಡೆಯಲಾಗದೇ ನಳಿನಿಯ ಇಚ್ಛೆಯಂತೆ ಅವಳ ತೌರುಮನೆಯ ಬಳಿ ವಿದ್ಯಾನಗರದಲ್ಲಿ ಬೇರೆ ಮನೆ ಮಾಡಿದ್ದ. ಮನೆಯ ಪರಿಸ್ಥಿತಿ ಕಂಡು ಇರಿಸು ಮುರಿಸಾಗಿ ಹುಡುಗಾಟಿಕೆ ಬಿಟ್ಟು ಆಗಾಗ ತಾಯಿಯನ್ನು ಸಂತೈಸುತ್ತಿದ್ದ. ಡಿಪ್ಲೊಮಾ ಮುಗಿಸಿದಾಕ್ಷಣ ಖಾಸಗಿ ಕಂಪನಿಯಲ್ಲಿ ಉದ್ಯೋಗವೂ ದೊರೆತಿತ್ತು. ಆದರೆ ರವಿ, ನಳಿನಿಯರ ಪ್ರಕರಣ ಅವನ ಮೇಲೆ ಗಂಭೀರ ಪರಿಣಾಮ ಬೀರಿದ್ದು ನಿಜ.

ಹಾಗೆಂದು ಪ್ರೇಮ ಕಡಿಮೆಯಾಗಿರಲಿಲ್ಲ... ಕೊಂಚ ಮಾಗಿತ್ತು. ನಾನೂ ಕೊತಂಬ್ರಿ ಸೈನ್ಸ್ ಕಾಲೇಜಿನಲ್ಲಿ ಬಿ.ಎಸ್ಸಿ.ಗೆ ಸೇರಿದ್ದೆ. ಈಗ ಅವನಿಗೆ ಅಡೆತಡೆಗಳೂ ಕಡಿಮೆ. ಅಪ್ಪ ಮನೆಯಲ್ಲಿ ಇರದಾಗ ಅವನದೇ ರಾಜ್ಯ. "ನೀ ಈಗ ಥೇಟ್ ಶರ್ಮಿಳಾ ಟ್ಯಾಗೋರ್ ಗತೆ ಕಾಣಸ್ತಿ ನೋಡು. ಕೂದಲಾ ಉದ್ದ ಬಿಟ್ಟು ಪೋನಿ ಟೇಲ್ ಕಟ್ಟು" ಎನ್ನುತ್ತಿದ್ದ. "ಇಷ್ಟು ಉದ್ದದ ಕೂದಲಾ ಪೋನಿ ಟೇಲ್ ಕಟ್ಟಿದ್ದರ ನಮ್ಮವ್ವ ನನ್ನ ಹೊರಗ ಹಾಕತಾಳ" ಎಂದಿದ್ದೆ. ನನಗೇನಾದರೂ ದುಃಖವಾಗಿದ್ದರೆ, "ಪುಷ್ಪಾ... ಐ ಹೇಟ್ ಟಿಯರ್ಸ್" ಎಂದು ರಾಜೇಶ ಖನ್ನಾನ ಪೋಸ್ ಕೊಟ್ಟು ಸಂತೈಸಲು ಮುಂದಾಗುತ್ತಿದ್ದ. ವಸುಮತಿಯ ಚಿಕ್ಕ ಮಗಳನ್ನು ಕರೆತಂದು, "ಯಾರು ಹೇಳು... ಪುಷ್ಪಾ ಮಾಮಿ" ಎಂದು ತೋರಿಸಿದಾಗ ನನ್ನ ಕದಪುಗಳು ರಂಗೇರಿ ಮನ ಮಯೂರ ನರ್ತನಗೈಯುತ್ತಿತ್ತು. ಅವನ ಆಪ್ತ ಸ್ನೇಹಿತರು ಕಾಲೇಜಿಗೆ ಹೋಗುವಾಗ ಮೆತ್ತಗೆ, "ನಮ್ಮ ವೈನಿ ಬಂದ್ರು" ಎಂದದ್ದೂ ಕೇಳಿದ್ದೆ. ಆಚೆ ಬೀದಿಯಲ್ಲಿದ್ದ ಪುಷ್ಪಾ ಎಂಬ ಪುಟ್ಟ ಮಗುವನ್ನೆತ್ತಿಕೊಂಡು ಬಂದು, "ಪುಷ್ಪಾ... ನನಗೊಂದು ಪಪ್ಪಿ ಕೊಡ..." ಎಂದು ನನ್ನ ಮುಂದೆಯೇ ಕೇಳಿ ಕೊಡಿಸಿಕೊಂಡರೆ ನಾನು ನಿಂತಲ್ಲೇ ನೀರಾಗುತ್ತಿದ್ದೆ. ಆದರೆ ಒಂದು ವಿಷಯ ಹೇಳಬೇಕೆಂದರೆ ಅವನೆಂದೂ ನನ್ನನ್ನು ಸ್ಪರ್ಶಿಸಲಿಲ್ಲ. ಸಿನಿಮಾದ ರೀತಿಯಲ್ಲಿ ಪ್ರಪೋಸ್ ಮಾಡಲಿಲ್ಲ. ಕೊನೆಗೆ ಪಾರ್ಕಿನಲ್ಲಿ ಕೈಹಿಡಿದು, "ಐ ಲವ್ ಯೂ" ಕೂಡ ಹೇಳಲಿಲ್ಲ. ಹೇಳಿದ್ದರೆ ನಮ್ಮ ಕತೆ ಏನಾಗುತ್ತಿತ್ತೋ ಗೊತ್ತಿಲ್ಲ. ಅವನ ಸಂಯಮವೂ 'ಅತಿ' ಎನಿಸಿ ನನಗೆ ಕಾಡಿದ್ದಿದೆ.

> ವರ್ಷ ಉರುಳಿದಂತೆ ಚಂದ್ರು ಬಂದಿದ್ದ. ಮತ್ತೆ ಉಡುಗೊರೆಗಳನ್ನು ಹೊತ್ತು ತಂದಿದ್ದ. ಆಸೆಯ ಕಂದೀಲು ಉರಿಸಿದ್ದ. ಆದರೆ ನನಗೆ ಅಪ್ಪ ಹಾಗೂ ಅಣ್ಣನನ್ನು ಎದುರಿಸುವ ಧೈರ್ಯವಿರಲಿಲ್ಲ. ಮನದಲ್ಲಿ ಕೊರಗಿದ್ದೇ ಬಂತು.

ಪಲ್ಲಟಗಳು ನಮ್ಮ ಮನೆಯಲ್ಲೂ ಆರಂಭವಾಗಿದ್ದವು. ಗುರಣ್ಣನಿಗೆ ಹೆಣ್ಣು ನೋಡುವ ಶಾಸ್ತ್ರಗಳು ಮೊದಲಾಗಿ ವಸುಂಧರಾ ಎಲ್ಲರಿಗೂ ಇಷ್ಟವಾಗಿದ್ದಳು. ಮೂರೇ ತಿಂಗಳಲ್ಲಿ ಮದುವೆಯಾಗಿ ಬಲಗಾಲಿಟ್ಟು ಮನೆಗೆ ಬಂದಿದ್ದಳು. ಸರಜಕ್ಕ ಬಂಧುಗಳಿಗಿಂತಲೂ ಹೆಚ್ಚಾಗಿ ಜವಾಬ್ದಾರಿ ಹೊತ್ತು ಮದುವೆಯಲ್ಲಿ ಓಡಾಡಿದ್ದರು. ಕೆಲವೇ ದಿನಗಳ ನಂತರ ಗುರುರಾಜ ಮತ್ತು ವಸುಂಧರಾ ಅಥಣಿಗೆ ಹೋಗಿ ಸಂಸಾರ ಹೂಡಿದ್ದರು. ಅಮ್ಮ ಸಂತೋಷದಿಂದಲೇ ನವದಂಪತಿಯ ಜೊತೆಯಲ್ಲಿ ಹೋಗಿ ಸಂಸಾರ ಹೊಂದಿಸಿಕೊಟ್ಟು ಬಂದಿದ್ದಳು. ಸರಜಕ್ಕ, "ಅಂತೂ ಭೋಲೊ ಸೊಸಿ ಬಂದ್ಲು.